**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ರವಿ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ**

---

**"ಕಳೆದ 6-7 ವರ್ಷಗಳಿಂದ ರಾಮನಗರ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ರಾಮನಗರ ಪ್ರಾದೇಶಿಕ ವಿಭಾಗ, ಕಾವೇರಿ ವನ್ಯಜೀವಿ ವಿಭಾಗ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗಗಳಲ್ಲಿ ಕಾಡಾನೆಗಳ ದಾಳಿ ಪ್ರಕರಣಗಳು ಪದೇ ಪದೇ ಮರುಕಳಿಸುತ್ತಿದ್ದು, ಇದರಿಂದಾಗಿ ಸುಮಾರು 33 ಮಂದಿ ಬಲಿಯಾಗಿದ್ದು, 91 ಮಂದಿ ದೈಹಿಕ ಹಾನಿಗೊಳಗಾಗಿದ್ದಾರೆ. ಇದಲ್ಲದೇ ಕಾಡಾನೆಗಳ ದಾಳಿಯಿಂದ ಸಾಕುಪ್ರಾಣಿ ಹತ್ಯೆ, ಆಸ್ತಿನಷ್ಟ (ಮನೆ ಗೋಡೆಗಳು, ವಾಹನ, ಜಮೀನಿನಲ್ಲಿರುವ ಶೆಡ್ ಗಳು, ಜಮೀನಿಗೆ ಅಳವಡಿಸಿರುವ ಪಂಪ್ ಸೆಟ್ಟು, ಪೈಪುಗಳು) ಬೆಳೆ ನಷ್ಟ (ಬಾಳೆ, ತೆಂಗು, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳು) ನಾಶವಾಗಿ ಅಪಾರ ಪ್ರಮಾಣದ ನಷ್ಟ ಉಂಟಾಗಿ ರೈತರು ಕೃಷಿ ಚಟುವಟಿಕೆಗಳಿಂದ ವಿಮುಖರಾಗುತ್ತಿದ್ದಾರೆ. ಈ ಭಾಗದಲ್ಲಿ ಕಾಡಾನೆಗಳ ನಿಯಂತ್ರಣಕ್ಕೆ ಅನೇಕ ಬಾರಿ ಮನವಿ ಮಾಡಿದ್ದರೂ ಅರಣ್ಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯವಹಿಸುತ್ತಿದ್ದು, ಆನೆಗಳನ್ನು ಕಾಡಿಗಟ್ಟಲು ಅಥವಾ ಸೆರೆಹಿಡಿಯಲು ಕಾಲಕಾಲಕ್ಕೆ ಆನೆ ಕ್ಯಾಂಪ್ ಗಳನ್ನು ಮಾಡಲು ಮತ್ತು ಆನೆಗಳ ಹಾವಳಿಗೆ ಶಾಶ್ವತ ಕಡಿವಾಣ ಹಾಕಲು ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಮಾಡದೇ ಹಾಗೂ ಕಾಡಾನೆಗಳ ದಾಳಿಯಿಂದಾಗುತ್ತಿರುವ ರೈತರ ನಷ್ಟಗಳಿಗೆ ಶೀಘ್ರ ಪರಿಹಾರ ಒದಗಿಸಲು ಅರಣ್ಯ ಇಲಾಖೆಯವರು ಆಸಕ್ತಿ ತೋರದೆ ಇರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಗಳಾಗುತ್ತಿರುವ ಕುರಿತು"**

*****

ರಾಮನಗರ ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗಕ್ಕೆ ಹೊಂದಿಕೊಂಡಂತೆ ರಾಮನಗರ ಪ್ರಾದೇಶಿಕ ವಿಭಾಗ ಹಾಗೂ ಕಾವೇರಿ ವನ್ಯಜೀವಿ ಧಾಮದ ಅರಣ್ಯ ಪ್ರದೇಶಗಳ ಮುಖಾಂತರ ಹಾರೋಹಳ್ಳಿ ಮತ್ತು ಕೋಡಿಹಳ್ಳಿ ವನ್ಯಜೀವಿ ವಲಯಗಳ ಅರಣ್ಯ ಪ್ರದೇಶಗಳಿಂದ ಪ್ರತಿ ದಿನ ಕಾಡಾನೆಗಳು ಸಂಚರಿಸುತ್ತಿರುತ್ತವೆ. ಸದರಿ ವನ್ಯಜೀವಿ ವಲಯಗಳ ಅರಣ್ಯ ಪ್ರದೇಶಗಳ ಸುತ್ತಾ ಗ್ರಾಮಗಳು ದ್ವೀಪಗಳಂತೆ ಅಲ್ಲಲ್ಲಿ ಇರುವುದರಿಂದ ಕಾಡಾನೆಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಸಂಚರಿಸುವಾಗ ಸದರಿ ಆನೆಗಳು ಕೋಡಿಹಳ್ಳಿ ಹಾಗೂ ಹಾರೋಹಳ್ಳಿ ವನ್ಯಜೀವಿ ವಲಯ ವ್ಯಾಪ್ತಿಯ ಕಾಡಂಚಿನಲ್ಲಿರುವ ಗ್ರಾಮಗಳಲ್ಲಿ ಸಾಕುಪ್ರಾಣಿ ಹತ್ಯೆ, ಆಸ್ತಿನಷ್ಟ (ಮನೆ ಗೋಡೆಗಳು, ನೀರಾವರಿ ಪಂಪ್ ಸೆಟ್ ಗಳು ಮತ್ತು ಪೈಪ್‌ಗಳು, ಜಮೀನಿನಲ್ಲಿರುವ ಶೆಡ್ ಗಳ ಗೋಡೆಗಳನ್ನು) ಮತ್ತು ಜಮೀನಿನಲ್ಲಿ ರೈತರು ಬೆಳೆದಿರುವಂತಹ ಆಕರ್ಷಕ ಬೆಳೆಗಳಾದ ಬಾಳೆ, ತೆಂಗು, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳನ್ನು ಕೆಲವು ಸಂದರ್ಭಗಳಲ್ಲೂ ನಾಶ ಮಾಡುತ್ತಿರುತ್ತವೆ.

ರೈತರು ಕೃಷಿ ಚಟುವಟಿಕೆ / ವ್ಯವಸಾಯ ಮಾಡಲು ಜಮೀನುಗಳಿಗೆ ತೆರಳುವ ಸಂದರ್ಭಗಳಲ್ಲಿ ಮಾನವ ಪ್ರಾಣ ಹಾನಿ ಮತ್ತು ಮಾನವ ಗಾಯಗಳಂತಹ ಪ್ರಕರಣಗಳು ಸಹ ಸಂಭವಿಸುತ್ತಿವೆ. ಸದರಿ ಪ್ರಕರಣಗಳನ್ನು ನಿಯಂತ್ರಣ ಮಾಡಲು ರಾಮನಗರ ಜಿಲ್ಲೆಯ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗದ ವ್ಯಾಪ್ತಿಯೊಳಗೆ ಬರುವ ಹಾರೋಹಳ್ಳಿ ಮತ್ತು ಕೋಡಿಹಳ್ಳಿ ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ ವನ್ಯಪ್ರಾಣಿ ಹಾವಳಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಎಲ್ಲಾ ಮನವಿಗಳಿಗೆ ಕೂಡಲೇ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ.

ಅಲ್ಲದೇ, ರಾಮನಗರ ಜಿಲ್ಲೆಯ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವಿಭಾಗದ ಆನೆ ಕಾರ್ಯಪಡೆಯು ಕೋಡಿಹಳ್ಳಿ ಹಾಗೂ ಹಾರೋಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರುವ ಆನೆಗಳ ಇರುವಿಕೆ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ ಸ್ವೀಕೃತವಾಗುವ ದೂರುಗಳನ್ನು ಸಹ ಅಧಿಕಾರಿ ಸಿಬ್ಬಂದಿಗಳ ಮೂಲಕ ತಕ್ಷಣವೇ ಸ್ಪಂದಿಸಿ ಕಾಡಾನೆಗಳನ್ನು ಹಿಮ್ಮೆಟ್ಟಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-

....2

1. ಸರ್ಕಾರದ ಆದೇಶ ಸಂಖ್ಯೆ:ಅಪಜೀ 170 ಎಫ್‌ಡಬ್ಲ್ಯೂಎಲ್ 2022, ದಿನಾಂಕ:30-06-2023ರಲ್ಲಿ ರಾಮನಗರ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಬೆಂಗಳೂರು ಜಿಲ್ಲೆಗಳಲ್ಲಿ ಕಾಡಾನೆ ಹೆಚ್ಚಾಗಿರುವ ಭಾಗಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಜಿಲ್ಲಾ ಆನೆ ಕಾರ್ಯಪಡೆಯನ್ನು (ETF) ರಚಿಸಲಾಗಿರುತ್ತದೆ.

ಸದರಿ ಆನೆ ಕಾರ್ಯಪಡೆಯಲ್ಲಿ ವಲಯ ಅರಣ್ಯಾಧಿಕಾರಿ, ಉಪ ವಲಯ ಅರಣ್ಯಾಧಿಕಾರಿಗಳು, ಗಸ್ತು ಅರಣ್ಯ ಪಾಲಕರು ಹಾಗೂ 24 ಸಂಖ್ಯೆ ಹೊರಗುತ್ತಿಗೆ ಸಿಬ್ಬಂದಿಗಳು ಅರಣ್ಯ ಪ್ರದೇಶದ ಗಡಿಗಳಲ್ಲಿ ಕಾಡಾನೆಗಳು ಕಾಡಿನಿಂದ ನಾಡಿಗೆ ಬಾರದಂತೆ ಹಿಮ್ಮೆಟ್ಟಿಸಲು ಶ್ರಮಿಸುತ್ತಿದ್ದಾರೆ ಹಾಗೂ ಪ್ರತಿ ದಿನ ಬೆಳಿಗ್ಗೆ ಆನೆ ಕಾರ್ಯಪಡೆ ವತಿಯಿಂದ ಗ್ರಾಮಗಳಿಗೆ ತೆರಳಿ ಗ್ರಾಮಸ್ಥರಿಗೆ ಧ್ವನಿವರ್ಧಕದ ಮೂಲಕ ಮಾಹಿತಿ ನೀಡಲಾಗುತ್ತಿದೆ. ಸಾರ್ವಜನಿಕರಿಂದ ಆನೆಗಳ ಇರುವಿಕೆ ಬಗ್ಗೆ ಆನೆ ಕಾರ್ಯಪಡೆ Control Room ಗೆ ಸ್ವೀಕೃತವಾಗುವ ದೂರುಗಳಿಗೆ ಸಂಬಂದಿಸಿದಂತೆ ಸಿಬ್ಬಂದಿಗಳು ತೆರಳಿ ಆನೆಗಳನ್ನು ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆನೆ ಕಾರ್ಯಪಡೆ Control Roomನ ಮೂಲಕ ಕಾಡಂಚಿನ ಗ್ರಾಮಗಳ ಗ್ರಾಮಸ್ಥರ ಮೊಬೈಲ್ ದೂರವಾಣಿ ಸಂಖ್ಯೆಯನ್ನು ನೋಂದಣಿ ಮಾಡಿ ಎಸ್.ಎಂ.ಎಸ್ ಮೂಲಕ ಕಾಡಾನೆಗಳ ಚಲನವಲನಗಳ ಮಾಹಿತಿಯನ್ನು ನೀಡುವ ಮೂಲಕ ಅರಿವು ಮೂಡಿಸಲಾಗುತ್ತಿದೆ ಹಾಗೂ ಕಾಡಾನೆಗಳು ರೈತರ ಜಮೀನಿಗೆ ಬರದಂತೆ ತಡೆಯಲು ಅರಣ್ಯ ಪ್ರದೇಶದ ಗಡಿಗಳಲ್ಲಿ 4 ಆನೆ ಹಿಮ್ಮೆಟ್ಟಿಸುವ ತಂಡ, 8 ಕಳ್ಳಬೇಟೆ ತಡೆ ಶಿಬಿರ, 2 ಆನೆ ಕಾರ್ಯ ಪಡೆ ತಂಡಗಳು ಹಾಗೂ ಇಲಾಖೆಯ ಸಿಬ್ಬಂದಿಗಳು ಹಗಲು ರಾತ್ರಿ ಪಹರೆ ಮಾಡುತ್ತಿರುತ್ತಾರೆ.

2. ರಾಮನಗರ ಜಿಲ್ಲಾ ವ್ಯಾಪ್ತಿಗೆ ಒಳಪಡುವ ರಾಮನಗರ ವಿಭಾಗ, ಭಾಗಶಃ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ಭಾಗಶಃ ಕಾವೇರಿ ವನ್ಯಜೀವಿ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಲು ಕೈಗೊಂಡಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ:-

(ಕಿ.ಮೀಗಳಲ್ಲಿ)

| ಕ್ರ. ಸಂ. | ವಿಭಾಗ | ಸೋಲಾರ್ಟೆಂಟಕಲ್ಬೇಲಿ / ಸೋಲಾರ್ತಂತಿ ಬೇಲಿ | | ಆನೆತಡೆಕಂದಕ | | ರೈಲ್ವೆಬ್ಯಾರಿಕೇಡ್ | |
|---|---|---|---|---|---|---|---|
| | | 2023ರ ವರೆಗೆ | 2023-24 | 2023ರ ವರೆಗೆ | 2023-24 | 2023ರ ವರೆಗೆ | 2023-24 |
| 1 | ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ | 106.14 | 35.5 | 26.09 | 32.60 | 11.49 | 18.70 |
| 2 | ರಾಮನಗರ (ಪ್ರಾ) ವಿಭಾಗ | 30.75 | 10.00 | 20.27 | 0.00 | 4.25 | 4.00 |
| 3 | ಕಾವೇರಿ ವನ್ಯಜೀವಿ ವಿಭಾಗ | 14.90 | 9.00 | 16.80 | 0.00 | 28.27 | 17.00 |

ರಾಮನಗರ ಜಿಲ್ಲಾ ವ್ಯಾಪ್ತಿಗೆ ಒಳಪಡುವ ರಾಮನಗರ ವಿಭಾಗ, ಭಾಗಶಃ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ಭಾಗಶಃ ಕಾವೇರಿ ವನ್ಯಜೀವಿ ವ್ಯಾಪ್ತಿಯಲ್ಲಿ ಕಾಡಾನೆ ಒಳಗೊಂಡಂತೆ ಇತರೆ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಮಾನವ-ಪ್ರಾಣ ಹಾನಿ, ಮಾನವ-ಗಾಯ, ಶಾಶ್ವತ ಅಂಗವಿಕಲತೆ, ಬೆಳೆ ಹಾನಿ, ಸಾಕು ಪ್ರಾಣಿ ಹತ್ಯೆ, ಮತ್ತು ಆಸ್ತಿ ನಷ್ಟ ಪ್ರಕರಣಗಳು ಮತ್ತು ಪಾವತಿಸಲಾದ ದಯಾತ್ಮಕ ಧನದ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

ಸಂಖ್ಯೆ:ಅಪಜೀ 33 ಎಫ್‌ಡಬ್ಲ್ಯೂಎಲ್ 2024

## ಅನುಬಂಧ

### ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆ ಹಾನಿ, ಸಾಕು ಪ್ರಾಣಿ ಹತ್ಯೆ, ಮಾನವ-ಪ್ರಾಣ ಹಾನಿ, ಮಾನವ-ಗಾಯ, ಶಾಶ್ವತ ಅಂಗವಿಕಲತೆ ಮತ್ತು ಆಸ್ತಿ ನಷ್ಟ ಪ್ರಕರಣಗಳು ಮತ್ತು ಪಾವತಿಸಲಾದ ದಯಾತ್ಮಕ ಧನದ ವಿವರಗಳು

ಮೊತ್ತ ರೂ.ಗಳಲ್ಲಿ

| ವಿಭಾಗ | ವರ್ಷ | ಮಾನವ ಪ್ರಾಣ ಹಾನಿ | | ಶಾಶ್ವತ ಅಂಗವಿಕಲತೆ | | ಮಾನವ ಗಾಯ | | ಬೆಳೆ ಹಾನಿ | | ಸಾಕು ಪ್ರಾಣಿ ಹತ್ಯೆ | | ಆಸ್ತಿ ನಷ್ಟ | |
|---|---|---|---|---|---|---|---|---|---|---|---|---|---|
| | | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| ಕಾವೇರಿ ವಜೀ ವಿಭಾಗ | 2018-19 | - | - | | | 1 | 18,000 | 408 | 16,18,227 | 52 | 3,55,000 | | |
| | 2019-20 | | | | | | | 441 | 24,81,577 | 38 | 2,90,000 | | |
| | 2020-21 | | | | | | | 645 | 38,47,463 | 62 | 4,35,000 | 52 | 3,70,000 |
| | 2021-22 | | | | | | | 642 | 31,08,302 | 93 | 6,39,000 | 30 | 1,42,990 |
| | 2022-23 | | | | | 3 | 45,979 | 554 | 30,68,790 | 101 | 9,50,964 | 37 | 1,58,350 |
| | **ಒಟ್ಟು** | **-** | **-** | **-** | **-** | **4** | **63,979** | **2,690** | **1,41,24,359** | **346** | **26,69,964** | **119** | **6,71,340** |

| ವಿಭಾಗ | ವರ್ಷ | ಮಾನವ ಪ್ರಾಣ ಹಾನಿ | | ಶಾಶ್ವತ ಅಂಗವಿಕಲತೆ | | ಮಾನವ ಗಾಯ | | ಬೆಳೆ ಹಾನಿ | | ಸಾಕು ಪ್ರಾಣಿ ಹತ್ಯೆ | | ಆಸ್ತಿ ನಷ್ಟ | |
|---|---|---|---|---|---|---|---|---|---|---|---|---|---|
| | | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| ರಾಮನಗರ ಪ್ರಾ ವಿಭಾಗ | 2018-19 | 1 | 5,00,000 | | | 4 | 10,62,063 | 1,152 | 64,81,575 | 601 | 41,58,311 | | |
| | 2019-20 | 2 | 10,00,000 | - | - | 2 | 1,13,700 | 1509 | 55,11,181 | 330 | 22,76,164 | - | - |
| | 2020-21 | 2 | 15,00,000 | 1 | 5,00,000 | 16 | 20,37,709 | 1571 | 75,98,036 | 493 | 34,04,700 | 44 | 3,87,290 |
| | 2021-22 | 3 | 22,50,000 | - | - | 2 | 5,66,330 | 4379 | 2,26,54,039 | 849 | 65,16,300 | 369 | 20,63,040 |
| | 2022-23 | 1 | 7,50,000 | | | 15 | 7,66,770 | 4925 | 2,64,20,780 | 854 | 60,10,700 | 854 | 17,27,750 |
| | **ಒಟ್ಟು** | **9** | **60,00,000** | **1** | **5,00,000** | **39** | **45,46,572** | **13,536** | **6,86,65,611** | **3,127** | **2,23,66,175** | **1,267** | **41,78,080** |

| ವಿಭಾಗ | ವರ್ಷ | ಮಾನವ ಪ್ರಾಣ ಹಾನಿ | | ಶಾಶ್ವತ ಅಂಗವಿಕಲತೆ | | ಮಾನವ ಗಾಯ | | ಬೆಳೆ ಹಾನಿ | | ಸಾಕು ಪ್ರಾಣಿ ಹತ್ಯೆ | | ಆಸ್ತಿ ನಷ್ಟ | |
|---|---|---|---|---|---|---|---|---|---|---|---|---|---|
| | | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ | ಪ್ರಕರಣ | ಮೊತ್ತ |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| ಬನ್ನೇರುಘಟ್ಟ ರಾ.ಉ | 2018-19 | 2 | 10,00,000 | - | - | - | - | 627 | 21,85,883 | 30 | 2,20,500 | 21 | 63,600 |
| | 2019-20 | - | - | - | - | - | - | 523 | 22,68,522 | 49 | 3,28,296 | 64 | 2,39,380 |
| | 2020-21 | 1 | 7,50,000 | - | - | - | - | 1,278 | 41,75,465 | 37 | 2,97,000 | 113 | 3,84,330 |
| | 2021-22 | 2 | 15,00,000 | - | - | - | - | 1,087 | 45,18,767 | 45 | 3,43,000 | 106 | 4,24,100 |
| | 2022-23 | 3 | 22,50,000 | - | - | - | - | 1,117 | 53,32,990 | 56 | 5,25,000 | 102 | 3,01,300 |
| | **ಒಟ್ಟು** | **8** | **55,00,000** | **-** | **-** | **-** | **-** | **4,632** | **1,84,81,627** | **217** | **17,13,796** | **406** | **14,12,710** |
| | **ಒಟ್ಟಾರೆ** | **17** | **1,15,00,000** | **1** | **5,00,000** | **43** | **46,10,551** | **20,858** | **10,12,71,597** | **3,690** | **2,67,49,935** | **1,792** | **62,62,130** |

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ)
ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು